

# ಅತೀತ ಅನಂತ ಕಲ್ಯಾಣ

ಪ್ರವೀಣ ಕುಲಕರ್ಣಿ

ಗುಜರಾತಿನ ಜಾಮ್ ನಗರದಲ್ಲಿ ಇತ್ತೀಚೆಗೆ ನಡೆದ ವಿವಾಹಪೂರ್ವ ಕಾರ್ಯಕ್ರಮವೊಂದು ಜಗತ್ತಿನ ಗಮನಸೆಳೆಯಿತು. ಭಾರತ ಮಾತ್ರವಲ್ಲದೆ ಜಗತ್ತಿನ ಸೆಲೆಬ್ರಿಟಿಗಳೆಲ್ಲ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಭಾರತದ ಪ್ರಮುಖ ಮಾಧ್ಯಮಗಳು ಅದನ್ನೊಂದು ದೇಶದ ಅತ್ಯಂತ ಮಹತ್ವದ ವಿದ್ಯಮಾನ ಎನ್ನುವಂತೆ ತೋರಿಸಿದವು. ಟಿ.ವಿ. ಮಾಧ್ಯಮಗಳ ನೇರ ಪ್ರಸಾರದ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಹಾಗಾದರೆ ಯಾರಿದ್ದಿರಬಹುದು ಅಂತಹ ಸೆಲೆಬ್ರಿಟಿ? ನಿಮ್ಮ ಊಹೆ ನಿಜ. ಭಾರತದ ಅತ್ಯಂತ ಶ್ರೀಮಂತ ಉದ್ಯಮಿ ಮುಕೇಶ್ ಅಂಬಾನಿ ಅವರ ಕಿರಿಯ ಮಗ ಅನಂತ ಮತ್ತು ರಾಧಿಕಾ ಮರ್ಚೆಂಟ್ ಅವರ ವಿವಾಹಪೂರ್ವ ಕಾರ್ಯಕ್ರಮ ಅದು.

ರಿಲಯನ್ಸ್ ಸಂಸ್ಥೆಯ ನಿರ್ದೇಶಕರಾಗಿರುವ ಅನಂತ, ಮುಕೇಶ್ ಮತ್ತು ನೀತಾ ಅವರ ಮುದ್ದಿನ ಮಗ. ಅತ್ಯಂತ ಸುಖದ ಸುಪ್ಪತ್ತಿಗೆ ವಾತಾವರಣದಲ್ಲಿ ಬೆಳೆದ ಈ ಹುಡುಗ ಹತ್ತಿಯ ಮೂಟೆಯಂತೆ ಊದಿಕೊಂಡಿದ್ದರು. ಕೇವಲ ಹದಿನೆಂಟು ತಿಂಗಳಲ್ಲಿ 108 ಕೆ.ಜಿ. ತೂಕ ಇಳಿಸಿಕೊಂಡು ದೇಶದಾದ್ಯಂತ ಸುದ್ದಿಯಾಗಿದ್ದರು. ಈಗಿನ ಪೀಳಿಗೆಯವರು, ಅದರಲ್ಲೂ, ಯುವ ಉದ್ಯಮಿಗಳು ಫೇಸ್‌ಬುಕ್, ಎಕ್ಸ್ ಅಕೌಂಟುಗಳನ್ನು ಹೊಂದಿ ಸಾಮಾಜಿಕ ಮಾಧ್ಯಮಗಳಲ್ಲಿ ಸಕ್ರಿಯವಾಗಿರುವುದು ಸಾಮಾನ್ಯ. ಆದರೆ, ಅನಂತ ಅವರು ಯಾವ ಸಾಮಾಜಿಕ ಜಾಲತಾಣದ ಖಾತೆಯನ್ನೂ ಹೊಂದಿಲ್ಲ. ಮೊದಮೊದಲು ಇಂಡಿಯನ್ ಪ್ರೀಮಿಯರ್ ಲೀಗ್'(ಐಪಿಎಲ್)ನಲ್ಲಿ ಸಕ್ರಿಯರಾಗಿದ್ದ (ಅವರ ಸಂಸ್ಥೆ ಮುಂಬೈ ಇಂಡಿಯನ್ಸ್ ತಂಡದ ಮಾಲೀಕತ್ವ ಹೊಂದಿತ್ತು) ಅವರು, ಈಗ ಸಂಪೂರ್ಣವಾಗಿ ಉದ್ಯಮದ ಕಡೆಗೆ ಮುಖ ಮಾಡಿದ್ದಾರೆ.

ಮುಕೇಶ್ ಅವರ ಉಳಿದ ಇಬ್ಬರು ಮಕ್ಕಳು ಮುಂಬೈನಲ್ಲಿ ಹೆಚ್ಚಾಗಿದ್ದರೆ, ಅನಂತ ಅವರದು ಜಾಮ್ ನಗರವೇ ಕಾರ್ಯಕ್ಷೇತ್ರ. 'ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್' ಆವರಣಕ್ಕೆ ಹೊಂದಿಕೊಂಡಂತೆ ಅವರು ನಿರ್ಮಿಸಿದ 'ವಂತಾರಾ ವನ್ಯಜೀವಿ ಧಾಮ'ವು ಜಗತ್ತಿನಲ್ಲೇ ಅನನ್ಯವಾದುದು. ಗಾಯಗೊಂಡ, ಸಂತ್ರಸ್ತ ಪ್ರಾಣಿಗಳ ಆಶ್ರಯ ತಾಣ ಇದಾಗಿದೆ. ನೂರಾರು ಕೋಟಿ ರೂಪಾಯಿ ಸುರಿದು ನಿರ್ಮಿಸಿದ ಈ ತಾಣದಲ್ಲಿ ಗಾಯಗೊಂಡ ಆನೆಗಳು ಹಾಗೂ ಇತರ ಪ್ರಾಣಿಗಳಿಗೆ ಆರೈಕೆ ಮಾಡಲಾಗುತ್ತದೆ. ಅತ್ಯಾಧುನಿಕ ಚಿಕಿತ್ಸಾ ಸೌಲಭ್ಯ, ಪೌಷ್ಟಿಕ ಆಹಾರ ವ್ಯವಸ್ಥೆಯನ್ನು ಇಲ್ಲಿ ಮಾಡಲಾಗಿದೆ. ಕೃತಕ ಸರೋವರಗಳನ್ನು ನಿರ್ಮಿಸಲಾಗಿದೆ. ಮುಲ್ತಾನಿ ಮಣ್ಣಿನಲ್ಲಿ ಆನೆಗಳು ಆಟವಾಡಲು ಅವಕಾಶ ಕಲ್ಪಿಸಲಾಗಿದೆ. ವಂತಾರಾದ ಇಂಚಿಂಚನ್ನೂ ಬಲ್ಲ ಅನಂತ ಅವರ ಧ್ವನಿ ಕೇಳಿದರೆ ಆನೆಗಳು ಹತ್ತಿರ ಬರುತ್ತವೆ.

ಅನಂತ ಎಲ್ಲಿಯೇ ಮಾತನಾಡಲಿ ಜನರ ಹೃದಯ ಗೆಲ್ಲುತ್ತಾರೆ ಎಂದು ಅವರನ್ನು ಹತ್ತಿರದಿಂದ ಬಲ್ಲವರು ಹೇಳುತ್ತಾರೆ. ರಿಲಯನ್ಸ್ ಕಂಪನಿ ನಲವತ್ತು ವರ್ಷ ಪೂರೈಸಿದಾಗ ಅನಂತ ದಿಕ್ಸೂಚಿ ಭಾಷಣ ಮಾಡಿದ್ದರು. 'ನಮ್ಮ ಕಂಪನಿಯ ಸಂಸ್ಥಾಪಕರೂ ನಮ್ಮ ತಾತನವರೂ ಆದ ಧೀರೂಭಾಯಿ ಒಂದು ಮಾತು ಹೇಳಿದ್ದರು. ಜಗತ್ತಿನಲ್ಲಿ ಸಂಬಂಧವೇ ಎಲ್ಲಕ್ಕಿಂತಲೂ ಮುಖ್ಯವಾದುದು. ಉಳಿದ ಸಂಗತಿಗಳು ಅದರ ಮುಂದೆ ಸಣ್ಣವು' ಎಂದು. 'ನಿಮ್ಮೊಂದಿಗೆ ಹೃದಯದ ಸಂಬಂಧ ಹೊಂದಲು ನಾನು ಉತ್ಸುಕನಾಗಿದ್ದೇನೆ. ರಿಲಯನ್ಸ್ ನನ್ನ ಬದುಕಾಗಿದೆ' ಎಂದೂ ಅವರು ಹೇಳಿದ್ದರು. ಹೀಗಾಗಿ ಅವರ ಮೇಲೆ ರಿಲಯನ್ಸ್ ಪರಿವಾರ ಅಪಾರ ಪ್ರೀತಿ ಇಟ್ಟುಕೊಂಡಿದೆ.

ಅನಂತ ಅವರ ವಿವಾಹಪೂರ್ವ ಕಾರ್ಯಕ್ರಮ ಅತ್ಯಂತ ವೈಭವೋಪೇತವಾಗಿ ನಡೆಯಿತು. ಮಾಡಿದ ಖರ್ಚು ನೂರಾರು ಕೋಟಿ ರೂಪಾಯಿ ದಾಟಿದೆ ಎಂಬುದೊಂದು ಅಂದಾಜು. ಕಾರ್ಯಕ್ರಮಕ್ಕೆ ಬಂದ ಸಾವಿರಾರು ಗಣ್ಯರಿಗೆ ಚಾರ್ಟರ್ ವಿಮಾನಗಳ ವ್ಯವಸ್ಥೆ ಮಾಡಲಾಗಿತ್ತು. ಶ್ರೀಮಂತಿಕೆಯ ಪ್ರದರ್ಶನ ಧಾಳಾಗಿ ನಡೆಯಿತು. ಇದೆಲ್ಲವೂ ನಿಜ. ಆದರೆ, ಅನಂತ ವಂತಾರಾದ ಪಕ್ಕದ ಹಳ್ಳಿಗಳ ಜನರನ್ನು ಕುಟುಂಬ ಸಹಿತರಾಗಿ ಬರಮಾಡಿಕೊಂಡು ರಾಧಿಕಾ ಜತೆ ತಾವೇ ನಿಂತು ಉಣಬಡಿಸಿದರು. ಹೃದಯ ಶ್ರೀಮಂತಿಕೆಯನ್ನೂ ಮೆರೆದರು. ಪ್ರಾಣಿಗಳ ಮೇಲೆ, ಜನಸಾಮಾನ್ಯರ ಮೇಲೆ ಅವರಿಗಿರುವ ಪ್ರೀತಿ ಕಂಡು ಗಣ್ಯರೆಲ್ಲ ಮೂಗಿನ ಮೇಲೆ ಬೆರಳಿಟ್ಟರು. ಸುಂದರಿ ರಾಧಿಕಾ ಅವರಂತೂ ಹೃದಯವನ್ನೇ ಕೊಟ್ಟರು. ಕೌಟುಂಬಿಕ ಮೌಲ್ಯ ಪ್ರತಿಪಾದಿಸುವ, ಅಮ್ಮನ ಮೇಲೆ ಅನಂತ ಪ್ರೀತಿ ತೋರುವ ಈ ಯುವ ಉದ್ಯಮಿ ವಿವಾಹಪೂರ್ವ ಕಾರ್ಯಕ್ರಮದಲ್ಲಿ ಇತರರಿಗಿಂತ ಭಿನ್ನವಾಗಿ ಕಂಡರು. ಬರೀ ದೇಹದ ತೂಕದಲ್ಲಲ್ಲ, ವ್ಯಕ್ತಿತ್ವದ ತೂಕದಲ್ಲೂ!

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65